ಪರಿಶೀಲನೆಯಲ್ಲಿದೆ ಎಂಬ ಮಾತನ್ನು ಬಿಟ್ಟು ಇಂಥ ತಾರೀಖಿನೊಳಗೆ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ಏನಾದರು ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ? ಇಲ್ಲವೇ ಬರೀ ಪರಿಶೀಲನೆಯಲ್ಲೇ ಮುಂದುವರಿಸಿದರೆ ಇರತಕ್ಕ ನಮ್ಮ ಪಾಲಿನ ನೀರೂ ಹೋಗುತ್ತದೆ, ರಸ್ತೆಗಳು ಸಹ ಎಲ್ಲಕಡೆ ಹಾಳಾಗಿ ಹೋಗಿವೆ; ಎಲ್ಲಾ ಕೆಲಸ ಕಾರ್ಯಗಳು ಸ್ಥಗಿತವಾದ ಪರಿಸ್ಥಿತಿ ಉಂಟಾಗಿದೆ. ತಮ್ಮಲ್ಲಿ ಹಣ ಯಥೇಚ್ಛವಾಗಿದೆ ಎಂದು ಹೇಳುತ್ತಿರುವುದರಿಂದ ಯಾವಾಗ ಈ ಖಾಲಿ ಇರತಕ್ಕ ಹುದ್ದೆಗಳನ್ನು ಭರ್ತಿ ಮಾಡುವುದಕ್ಕೆ ನಿರ್ದಿಷ್ಟವಾಗಿ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ಹೇಳಿ?

ಶ್ರೀ ಎಸ್. ಬಂಗಾರಪ್ಪ : —ಈ ಆದ್ಯತಾ ವಲಯದಲ್ಲಿ ಬರತಕ್ಕಂಥ ಕಾರ್ಯಕ್ರಮಗಳು ಏನಿವೆ ಅಂದರೆ ಕೋರ್ಸ್ ಸೆಕ್ಟಾರ್ ಪ್ರೈಯಾರಿಟಿ ಸೆಕ್ಟಾರ್‌ನಲ್ಲಿ ಬರತಕ್ಕ ಕಾರ್ಯಕ್ರಮಗಳು. ಅಂದರೆ ಪವರ್ ಜನರೇಷನ್, ಇರಿಗೇಷನ್‌ಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ, ತಾವು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗೆ ಸಂಬಂಧಪಟ್ಟದ್ದು ಕೇಳಿದ್ದೀರಿ. ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಮತ್ತು ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳಲ್ಲಿ ಅನೇಕ ಹುದ್ದೆಗಳು ಖಾಲಿ ಇರತಕ್ಕದ್ದು ಸರ್ಕಾರದ ಗಮನದಲ್ಲಿದೆ. ಹುದ್ದೆಗಳು ಎರಡು ರೀತಿಯಾಗಿ ಖಾಲಿ ಬೀಳುತ್ತವೆ ಒಟ್ಟು ಇಲಾಖೆಯಲ್ಲಿ ಎಷ್ಟು ಹುದ್ದೆಗಳು ಇರಬೇಕೆಂಬುದನ್ನು ಯೋಚನೆ ಮಾಡಿದರೆ ಹುದ್ದೆಗಳು ಖಾಲಿ ಇರುವುದು ಕಂಡುಬರುತ್ತದೆ. ಕೃಷ್ಣ ಯೋಜನೆಯನ್ನು ಮುಗಿಸಿಬೇಕೆಂದು ಇಂಜಿನಿಯರ್‌ಗಳನ್ನು ಹಾಕಿದರೆ ಈ ಕಡೆಗೆ ವರ್ಗ ಮಾಡಿಸಿಕೊಂಡು ಬರತಕ್ಕದ್ದು ನಡೆದಿದೆ. ಆದಕ್ಕಾಗಿ ನಾವು ಆದೇಶ ಕೂಡ ಕೊಟ್ಟಿದ್ದೇವೆ. ಏಕೆಂದರೆ ಕಾಲಕ್ಕೆ ಸರಿಯಾಗಿ ಕೆಲಸ ಕಾರ್ಯಗಳನ್ನು ನಾವು ಮುಗಿಸಬೇಕಾಗಿದೆ. ಕೃಷ್ಣ ಇತ್ಯಾದಿ ಪ್ರಾಜೆಕ್ಟ್‌ಗಳಲ್ಲಿ ಹಾಕತಕ್ಕ ಇಂಜಿನಿಯರ್‌ಗಳನ್ನು ಮತ್ತೇ ಈ ಕಡೆ ತರುವ ಹಾಗೆ ಇಲ್ಲ; ಯಾರೂ ಕೂಡ ಈ ಬಗ್ಗೆ ಒತ್ತಡ ತರಬಾರದು. ನಾಲ್ಕು ಜನ ಇಂಜಿನಿಯರ್‌ಗಳು ಈ ಕಡೆ ಬಂದರೆ ಅಲ್ಲಿ ವರ್ಕ್ ಹ್ಯಾಂಪರ್ ಆಗುತ್ತದೆ. ನಾವು ಅಲ್ಲಿಗೆ ಹಾಕಿದವರು ಯಾರೂ ಹಿಂದಕ್ಕೆ ಬರಬಾರದು. ಈ ಪ್ರಕಾರ ಬಾಕಿ ಉಳಿದಿರತಕ್ಕ ಹುದ್ದೆಗಳಿಗೆ ನೇಮಕಾತಿಯನ್ನು ಆದ್ಯತಾ ವಲಯದಲ್ಲಿ ಬರತಕ್ಕ ಯೋಜನೆಗಳಲ್ಲ ಮತ್ತು ಇಲಾಖೆಗಳಲ್ಲಿ ನೇಮಕ ಮಾಡತಕ್ಕ ಕೆಲಸವನ್ನು ಕೆಲವೇ ತಿಂಗಳಲ್ಲಿ ಪ್ರಾರಂಭಸುತ್ತಿದ್ದೇವೆ.

ಶ್ರೀ ಸಿ. ಬೈರೇಗೌಡ :— ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇನ್ನು ಉಳಿದಿರತಕ್ಕದ್ದು ಕೇವಲ 4 ತಿಂಗಳು ಮಾತ್ರ, ಆದುದರಿಂದ ನಾವು ಹೇಳತಕ್ಕದ್ದು, ಈಗಾಗಲೇ ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲವೆಂದು ಹೇಳುತ್ತಿದ್ದೀರಿ ಅಲ್ಲದೆ ಇದು ಕೋರ್ಸ್ ಸೆಕ್ಟಾರ್ ಎಂದು ಕೂಡ ಹೇಳುತ್ತಿದ್ದೀರಿ. ಆದುದರಿಂದ ನಿರ್ದಿಷ್ಟವಾಗಿ, ನಿಮ್ಮಲ್ಲಿ ಏನು ರೋಸ್ಟರ್ ಪದ್ಧತಿ ಇದೆಯೋ ಅಥವಾ ಏನು ಪದ್ಧತಿ ಇದೆಯೋ ಆ ಪ್ರಕಾರ ನೇಮಕ ಮಾಡಿ. ಇವತ್ತಿನ ದಿವಸ ಸಾವಿರಾರು ಜನ ಇಂಜಿನಿಯರ್‌ಗಳು ಕೆಲಸವಿಲ್ಲದೆ ಇದ್ದಾರೆ, ಮಾಡುವುದಕ್ಕೆ ನಿಮ್ಮಲ್ಲಿ ಕೆಲಸವು ಇದೆ. ಅವರನ್ನು ನೇಮಿಸುವುದಕ್ಕೆ ಮೀನಾಮೇಷ ಎಣಿಸುತ್ತಾ ಹೋದರೆ ಕೆಲಸ ಆಗುವುದಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗವೂ ಸಿಗುವುದಿಲ್ಲ. ದಯವಿಟ್ಟು ಈ ಬಗ್ಗೆ ತಕ್ಷಣ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ :— ನಾವು ಎರಡು ರೀತಿಯ ನೇಮಕಾತಿಯನ್ನು ಇಟ್ಟುಕೊಂಡಿದ್ದೇವೆ. ಒಂದು ಪಿ.ಎಸ್.ಸಿ. ಮೂಲಕ ಮತ್ತೊಂದು ಇಲಾಖಾ ನೇಮಕಾತಿ ಸಮಿತಿ ಮೂಲಕ. ಈ ಎರಡರ ಮೂಲಕ ಎಷ್ಟು ಶೀಘ್ರವಾಗಿ ಮಾಡುವುದಕ್ಕೆ ಸಾಧ್ಯ ಅಷ್ಟು ಶೀಘ್ರವಾಗಿ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ :— ಇದು ಮಾಮೂಲಿ ಉತ್ತರವೇ ಆಯಿತು.

ಬೆಳಗಾವಿ ಜಿಲ್ಲೆಯ ಶಹಾಪುರದಲ್ಲಿರುವ ವಿಶ್ವ ಭಾರತಿ ಸೇವಾ ಸಮಿತಿಯ ತನಿಖೆ ಬಗ್ಗೆ

528. ಶ್ರೀ ಬಿ.ಐ. ಪಾಟೀಲ್ (ಉಚಗಾಂವ):— ಮಾನ್ಯ ಶಿಕ್ಷಣ ಮತ್ತು ಸಂಸದೀಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಭಾರತಿ ಸೇವಾ ಸಮಿತಿ ಶಹಾಪುರದಿಂದ ನಡೆಸಲಾಗುತ್ತಿರುವ ಪಂಡಿತ ನೆಹರು ಪದವಿ ಪೂರ್ವ ಮಹಾವಿದ್ಯಾಲಯ ಶಹಾಪುರ ಬೆಳಗಾವಿ ಇವರ ದೂರಿನ ತನಿಖೆಯನ್ನು ಉಪ ನಿರ್ದೇಶಕರು ಕೈಗೊಂಡಿರುವರೇ?

ಆ) ಹಾಗಿದ್ದಲ್ಲಿ, ಸರ್ಕಾರವು ಕೈಗೊಂಡ ಕ್ರಮವೇನು?

ಇ) ಕ್ರಮ ಕೈಗೊಳ್ಳದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ:– (ಶಿಕ್ಷಣ ಸಚಿವರು):– (ಇವರ ಪರವಾಗಿ ಕಂದಾಯ ಮಂತ್ರಿಗಳಾದ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ ಅವರು ಉತ್ತರಿಸಿದರು)

ಅ) ಹೌದು.

ಆ) ಉಪ ನಿರ್ದೇಶಕರು ಪೂರ್ವಭಾವಿ ವರದಿಯ ಆಧಾರದ ಮೇಲೆ ಸಹ ನಿರ್ದೇಶಕರು ಬೆಳಗಾಂ ಇವರಿಗೆ ಅನುದಾನ ಸಂಹಿತೆ ನಿಯಾಮುವಳಿ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಇ) ಉದ್ಭವಿಸುವುದಿಲ್ಲ.

Sri B. I. Patil : I would like to know as to when the Commissioner of Public Instruction, Bangalore has issued the direction to the Joint Director, Belgaum to take action? The second part of the question is why there is so much of delay in taking the action when the mismanagement has been proved?

Sri Mallikarjuna M. Kharge : We have already requested Management to enquireinto the matter and under Rule 52, sub-clause(4) of the Grant-in-aid Code, we are going to take action and further the Joint Director will conduct the enquiry and if he is found guilty, naturally criminal cases will be launched against him.

Sri B. I. Patil : I would like to know the specific time within which the Government will take action in the matter.

Sri Mallikarjuna M. Kharge : We will take action as early as possible.

ರೈತರುಗಳ ಸಾಲ ಮನ್ನಾ ಬಗ್ಗೆ

397. ಶ್ರೀ ಗುರುಪಾದಪ್ಪ, ನಾಗಮಾರ್‌ಪಲ್ಲಿ (ಔರಾದ್) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) ರೈತರ ಸಾಲ ಮನ್ನಾ ಆಗಿರುವ ರೈತರ ಪಟ್ಟಿ ಡಿ.ಸಿ.ಸಿ. ಬ್ಯಾಂಕುಗಳಿಂದ ತಾಲ್ಲೂಕು ಮಟ್ಟದ ಕಮಿಟಿಗಳು ಶಿಫಾರಸ್ಸು ಮಾಡಿ ಕಳುಹಿಸಿರುವ ಪಟ್ಟಿ ಸರ್ಕಾರಕ್ಕೆ ಬಂದಿದೆಯೇ?

ಆ) ಈ ಖಾತೆದಾರರಿಗೆ ಸರ್ಕಾರದ ಹಣ ಎಷ್ಟು ಕೊಡಲಾಗಿದೆ?

ಇ) ಈ ದಿಶೆಯಲ್ಲಿ ಕೇಂದ್ರ ಸರ್ಕಾರದಿಂದ ಇದುವರೆವಿಗೆ ಎಷ್ಟು ಹಣ ಬಂದಿದೆ?

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಮಂತ್ರಿಗಳು):–

ಅ) ಇಲ್ಲ. (ಪಟ್ಟಿಗಳನ್ನು ಸಂಬಂಧಪಟ್ಟ ಸಂಘಗಳು ಹಾಗೂ ಬ್ಯಾಂಕುಗಳ ಶಾಖೆಗಳಲ್ಲಿ ಇಡಲಾಗಿರುತ್ತದೆ)

ಆ) ರಾಜ್ಯಸರ್ಕಾರದ ಪಾಲನ್ನು ನಬಾರ್ಡ್ ಸಂಸ್ಥೆಯಿಂದ ಸಾಲದ ರೂಪವಾಗಿ ಈಗಾಗಲೇ ಮೊದಲ ಕಂತಾಗಿ ರೂ. 22.33 ಕೋಟಿ ಕೊಡಲಾಗಿದೆ.

ಇ) ಈ ದಿಶೆಯಲ್ಲಿ ಕೇಂದ್ರ ಸರ್ಕಾರದ ಪಾಲಾಗಿ ಇದುವರೆಗೆ ಮೊದಲ ಕಂತಾಗಿ ರೂ. 22.33 ಕೋಟಿ ಬಂದಿದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟ ಮೊದಲನೆಯದಾಗಿ ಹಿರಿಯ ಸಹಕಾರಿಗಳು ಸಹಕಾರಿ ಖಾತೆಯನ್ನು ಹೊಂದಿದ್ದಾರೆ. ಬಹಳ ಸಂತೋಷ. ಒಳ್ಳೆಯ ರೀತಿಯಲ್ಲಿ ಈ